

بسم اللهِ الرّحمٰنِ الرّحيم

# ಯು.ಕೆ. ಜಲ್ಸ ಸಾಲಾನ – ಅಲ್ಲಾಹನ ಅಪರಿಮಿತ ಅನುಗ್ರಹಗಳ ಸುರಿಮಳೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **28-08-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬ್ರಿಟನಿನ ಜಲ್ಸ ಸಾಲಾನ ಜಯಪ್ರದವಾಗಿ ಜರಗಿದ ಬಗ್ಗೆ ಈಗ ವಿವಿಧ ದೇಶಗಳಿಂದ ನನಗೆ ಪತ್ರಗಳೂ ಫ್ಯಾಕ್ಸ್‌ಗಳೂ ಬರುತ್ತಾ ಇವೆ. ಶುಭಾಶಯಗಳು ಬರುತ್ತಾ ಇವೆ. ನಾವು ಎಂ.ಟಿ.ಎ. ಮೂಲಕ ಜಲ್ಸ ಸಾಲಾನ ನೇರವಾಗಿ ಕಂಡೆವು ಮತ್ತು ಪ್ರಯೋಜನ ಪಡೆದೆವು ಎಂದು ಪ್ರಕಟಿಸುತ್ತಾರೆ. ಆದರೆ ಜಲ್ಸದ ವಾಸ್ತವಿಕ ಲಾಭ ಮತ್ತು ಅನುಗ್ರಹ ನಮಗೆ ದೊರಕಲು ನಾವು ಧಾರಾಳ ಪ್ರಯತ್ನ ಮಾಡಬೇಕು. ನಾವು ನೋಡಿದುದನ್ನು ಮತ್ತು ಆಲಿಸಿದುದನ್ನು ನಮ್ಮ ಜೀವಿತವನ್ನು ಸುಧಾರಣೆ ಮಾಡುವ ಮಾರ್ಗವನ್ನಾಗಿ ಮಾಡಬೇಕು. ಇಂದಿನ ಕಾಲದಲ್ಲಿ ಲೋಕದ ದೃಷ್ಟಿ ನಮ್ಮ ಮೇಲೆ ಬಹಳ ಇರಿಸಲಾಗುತ್ತಿದೆ. ಈಗ ಲೋಕ ಎಂ.ಟಿ.ಎ. ಮೂಲಕ ನಮ್ಮ ಜಲ್ಸಗಳಲ್ಲಿ ಭಾಗವಹಿಸುತ್ತಿದೆ. ಅಹ್ಮದಿಯರೂ ಅನ್ಯರೂ ವಿಶಿಷ್ಟವಾಗಿ ಬ್ರಿಟನಿನ ಜಲ್ಸವನ್ನು ಬಹಳ ಗಾಢವಾದ ದೃಷ್ಟಿಯಿಂದ ನೋಡುತ್ತಾರೆ. ನಾವು ಎಂ.ಟಿ.ಎ. ಪ್ರಸಾರಕ್ಕೋಸ್ಕರ ಲಕ್ಷಾಂತರ ಪೌಂಡ್ ಖರ್ಚು ಮಾಡುತ್ತೇವೆ. ಇದರ ಬಹಳ ದೊಡ್ಡ ಒಂದು ಉದ್ದೇಶ ಇದಾಗಿದೆ: ಅಂದರೆ, ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವಿತದ ಉದ್ದೇಶಲಕ್ಷ್ಯವನ್ನು ತಲಪುವವನಾಗಲಿ. ಪ್ರತಿಯೊಬ್ಬ ಅಹ್ಮದಿಗೆ ಒಂದೇ ಸಮಯದಲ್ಲಿ ಈ ಸಂದೇಶ ತಲಪಲಿ ಎಂದು.

ನಮ್ಮ ಸಂತೋಷ ಕೇವಲ ಜಲ್ಸ ಸಾಲಾನ ವಿಜಯಕರವಾಗಿ ಜರಗಿದ ಶುಭಾಶಯಗಳಿಗೆ ಸೀಮಿತವಾಗಬಾರದು. ಇಲ್ಲಿಗೆ ಬಂದು ಜಲ್ಸದಲ್ಲಿ ಭಾಗವಹಿಸಿದವರು ಮತ್ತು ಎಂ.ಟಿ.ಎ. ಮೂಲಕ ಆಲಿಸಿದವರು ಮತ್ತು ನೋಡಿದವರು, ಅವರು ಕೇಳಿದ್ದನ್ನು ಮತ್ತು ನೋಡಿದುದನ್ನು ಮೆಲುಕು ಹಾಕುತ್ತಾ ಇರಬೇಕು. ತಮ್ಮ ಜೀವಿತದ ಭಾಗಗಳನ್ನಾಗಿ ಅವುಗಳನ್ನು ಮಾಡಬೇಕು. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಲೌಕಿಕತೆಯ ಈ ಕಾಲದಲ್ಲಿ ನಮ್ಮ ಸುಧಾರಣೆಗೆ, ನಮ್ಮ ಜ್ಞಾನ ವರ್ಧನೆಗೆ ಮತ್ತು ನಮ್ಮ ಕರ್ಮಗಳ ಅಭಿವೃದ್ಧಿಗೆ ಮತ್ತು ಅವುಗಳನ್ನು ಉತ್ತಮ ಪಡಿಸಲಿಕ್ಕೆ ಒಂದು ಲೌಕಿಕ ಆವಿಷ್ಕಾರವನ್ನು ಸಹ ನಮ್ಮ ಅಭಿವೃದ್ಧಿಗೆ ಮಾರ್ಗವನ್ನಾಗಿ ಅಲ್ಲಾಹನು ಮಾಡಿಕೊಟ್ಟಿರುವನು. ಇಂದು ಟೆಲಿವಿಶನ್, ಇಂಟರ್‌ನೆಟ್, ಪತ್ರಿಕೆಗಳು ಮತ್ತು ಇತರ ಪ್ರಚಾರ ಮಾರ್ಗಗಳು ನಮಗೋಸ್ಕರ ಕಾರ್ಯನಿರತವಾಗುವಾಗ ಒಬ್ಬ ಸತ್ಯವಿಶ್ವಾಸಿಯ ವಿಶ್ವಾಸದಲ್ಲಿ ವರ್ಧನೆ ಉಂಟಾಗುತ್ತದೆ. ಏಕೆಂದರೆ ಹದಿನಾಲ್ಕು ನೂರು ವರ್ಷಗಳ ಹಿಂದೆ ಇವುಗಳ ಬಗ್ಗೆ ಶುಭವಾರ್ತೆ ನೀಡಲಾಗಿತ್ತು. ಆ ಕಾಲದಲ್ಲಿ ಉಂಟಾಗುವ ಆವಿಷ್ಕಾರಗಳು ಧರ್ಮದ ಪ್ರಚಾರಕ್ಕೆ ಸಹಾಯಕವಾಗುವುವು ಎಂದು ಭವಿಷ್ಯ ನುಡಿಯಲಾಗಿತ್ತು. ನಾವು ಪ್ರತಿದಿನ ಈ ಭವಿಷ್ಯವಾಣಿ ಉತ್ತಮೋತ್ತಮವಾಗಿ ಈಡೇರುವುದನ್ನು ಕಾಣುತ್ತಿದ್ದೇವೆ. ಅಲ್ಲಾಹನು ಹೇಗೆ ಈ ಸಂದೇಶ ತಲಪಿಸುತ್ತಿದ್ದಾನೆಂದು ನಾನು ಮುಂದೆ ಪ್ರಸ್ತಾಪಿಸುವೆನು. ನಾವು ಯಾವಾಗಲೂ ಅಲ್ಲಾಹನ ಮುಂದೆ ಬಾಗುತ್ತಾ ಅವನಿಗೆ ಕೃತಜ್ಞತೆ ಅರ್ಪಿಸುತ್ತಾ ಮುಂದುವರಿಯುತ್ತಿರಬೇಕು. ನಾವು ಈ ರೀತಿ ಕೃತಜ್ಞತೆ ಅರ್ಪಿಸುತ್ತಾ ಇದ್ದರೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿರುವ ಹಾಗೆ ಇನ್ನಷ್ಟು ಅನುಗ್ರಹಗಳೂ ಅಭಿವೃದ್ಧಿಯೂ ನಮಗೆ ಲಭಿಸುವುದು. ಅಲ್ಲಾಹನು ಹೀಗೆ ಹೇಳಿದ್ದಾನೆ: **ಲಇನ್ ಶಕರ್‌ತುಮ್ ಲ ಅಝೀದನ್ನಕುಮ್** 'ನೀವು ಕೃತಜ್ಞತೆ ಅರ್ಪಿಸಿದರೆ ನಿಮಗೆ ನಿಶ್ಚಯವಾಗಿ ನಾವು ಇನ್ನಷ್ಟು ವರ್ಧಿಸಿಕೊಡುವೆವು.'

ಕೃತಜ್ಞತೆ ಅರ್ಪಿಸುವ ಈ ವಿಷಯ, ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದಕ್ಕೆ ಮಾರ್ಗದರ್ಶನ ನೀಡುವುದರೊಂದಿಗೆ ಜನರಿಗೆ ಕೃತಜ್ಞತೆ ಅರ್ಪಿಸುವ ಬಗ್ಗೆ ಸಹ ನಮ್ಮ ಗಮನ ಸೆಳೆಯುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು– ಯಾರು ಜನರಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸಲಾರನು. ನಮ್ಮ ಜಲ್ಸದ ಕಾರ್ಯಕರ್ತರಿಗೆ ಉತ್ತಮವಾಗಿ ಜಲ್ಸದ ವ್ಯವಸ್ಥೆ ನಡೆಸಲು ಪ್ರಯತ್ನ ಮಾಡುವ ಭಾಗ್ಯವನ್ನು ಅಲ್ಲಾಹನು ನೀಡಿದನು. ಹಲವು ವಿಭಾಗಗಳಲ್ಲಿ ಪುರುಷರೂ, ಮಹಿಳೆಯರೂ, ವೃದ್ಧರೂ, ಯುವಕರೂ, ಯುವತಿಯರೂ, ಬಾಲಕರೂ, ಬಾಲಿಕೆಯರೂ ಸೇವೆ ಮಾಡಿದರು. ಜಲ್ಸದ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ನಡೆಸಲು ತಮ್ಮ ಪೂರ್ಣ ಶಕ್ತಿ ಸಾಮರ್ಥ್ಯಗಳೊಂದಿಗೆ ಧಾರಾಳವಾಗಿ ಪ್ರಯತ್ನ ನಡೆಸಿದರು. ಸ್ವಯಂ ಸೇವಕರಾಗಿ ವಿವಿಧ ವಿಭಾಗಗಳಲ್ಲಿ ದುಡಿದವರಲ್ಲಿ ಕಂಪೆನಿಗಳ ಡೈರಕ್ಟರುಗಳು, ಇಂಜಿನಿಯರ್‌ಗಳು, ವೈಜ್ಞಾನಿಕ ವೃತ್ತಿಯವರು, ಮತ್ತು ಕಾರ್ಮಿಕ ವರ್ಗದವರು ಸೇರಿದ್ದರು. ಅವರೆಲ್ಲರೂ ಒಂದೇ ರೀತಿ ಕಾರ್ಯನಿರತರಾಗಿದ್ದರು. ಜಲ್ಸ ಮುಗಿತಾಯವಾದ ನಂತರ ಮಳೆ ಪ್ರಾರಂಭವಾಯಿತು. ಬಹಳ ಕಷ್ಟದಿಂದ ಸಾಮಗ್ರಿಗಳನ್ನು ಸಾಗಿಸಲಾಯಿತು. ಪ್ರತಿಯೊಂದು ಕೆಲಸ ಮುಖ್ಯ ಕೆಲಸವೇ ಆಗಿತ್ತು. ಈ ವರ್ಷ ಕೆನಡದಿಂದ ಸಹ ಸ್ವಯಂ ಸೇವಕರ ಒಂದು ಗುಂಪು ಆಗಮಿಸಿತ್ತು. ಅವರು ಸಹ ಬಹಳ ಕಷ್ಟಪಟ್ಟು ಕೆಲಸ ಮಾಡಿರುವರು. ಯು.ಕೆ.ಯ ಖುದ್ದಾಮ್ ಗುಂಪುಗಳೊಂದಿಗೆ ಕೆನಡದ ಖುದ್ದಾಮ್ ಗುಂಪಿಗೂ ಕೃತಜ್ಞತೆ ಅರ್ಪಿಸುತ್ತೇನೆ.

ಅವರೆಲ್ಲರೂ ನಮಗೆ ಬಹಳ ಸಹಾಯ ಮಾಡಿದರು. ಅಂತೂ ನಾವು ಎಲ್ಲಾ ಪುರುಷರಿಗೂ ಮಹಿಳೆಯರಿಗೂ ಕೃತಜ್ಞತೆ ಅರ್ಪಿಸುತ್ತೇವೆ. ಎಲ್ಲರೂ ಕೃತಜ್ಞತೆಗೆ ಅರ್ಹರೇ ಆಗಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಉತ್ತಮ ಪ್ರತಿಫಲ ದಯಪಾಲಿಸಲಿ. ನಾನು ಅತಿಥಿಗಳಿಗೂ ಕೃತಜ್ಞತೆ ಅರ್ಪಿಸುತ್ತೇನೆ. ಅವರೆಲ್ಲರೂ ಉತ್ತಮವಾಗಿ ಸಹಕರಿಸಿದ್ದಾರೆ. ಒಂದೆರಡು ಅಪವಾದಗಳ ಹೊರತು ಸಾಮಾನ್ಯವಾಗಿ ದೂರುಗಳೇನೂ ಇರಲಿಲ್ಲ.

ನಾನು ಈಗ ಜಲ್ಸದ ಬಗ್ಗೆ ಅತಿಥಿಗಳು ಸೂಚಿಸಿದ ಕೆಲವು ಅಭಿಪ್ರಾಯಗಳನ್ನು ನಿಮ್ಮ ಮುಂದಿಡುತ್ತೇನೆ. ಯುಗಾಂಡ ದೇಶದ ಒಬ್ಬ ಸರಕಾರಿ ಸಚಿವ ಆಗಮಿಸಿದ್ದರು. ಅವರ ಹೆಸರು ಮಿಸ್ಟರ್ ವಿಲ್‌ಸನ್. ಅವರು ಹೇಳುತ್ತಾರೆ: ಅತಿಥಿ ಸತ್ಕಾರ ಮತ್ತು ಭದ್ರತಾ ವ್ಯವಸ್ಥೆಯ ಅಚ್ಚುಕಟ್ಟುತನ ನೋಡಿ ನನಗೆ ಆಶ್ಚರ್ಯವಾಯಿತು. ಈ ಜನರು ಸ್ವಯಂಸೇವಕರಾಗಿ ಇಷ್ಟೆಲ್ಲಾ ತ್ಯಾಗ ಹೇಗೆ ಮಾಡುತ್ತಾರೆಂದು ನಾನು ಆಶ್ಚರ್ಯ ಚಕಿತನಾದೆ. ಈ ಜಮಾಅತ್ ಮಾಡುವ ಕೆಲಸದ ವ್ಯವಸ್ಥೆ ನೋಡುವಾಗ ಈ ಜಮಾಅತ್ ಕೆಲವೇ ವರ್ಷಗಳಲ್ಲಿ ಲೋಕದ ಮೇಲೆ ಜಯಗಳಿಸುವುದು ಎಂದು ಭಾಸವಾಗುತ್ತದೆ – ಇನ್‌ಶಾಅಲ್ಲಾಹ್. ಅಹ್ಮದಿಯಾ ಜಮಾಅತ್ ಮಾನವೀಯತೆಗೆ ಶಾಂತಿ, ಪ್ರೀತಿ ಮತ್ತು ಭ್ರಾತೃತ್ವದ ಒಂದು ಬೃಹತ್ತಾದ ಮಾದರಿಯಾಗಿದೆ ಎಂದು ಸಹ ಅವರು ಹೇಳಿದರು. ಮತ್ತೆ ಫ್ರೆಂಚ್ ಗಿಯಾನದ ಜ್ಯಾಕ್ ಬರ್‌ತೋಲ್ ಸಾಹಿಬ್. ಅವರು ಒಬ್ಬ ನ್ಯಾಯಾಧೀಶರಾಗಿದ್ದಾರೆ. ಅವರು ಆ ದೇಶದ ಬಿಷಪರ ಪ್ರತಿನಿಧಿಯಾಗಿ ಆಗಮಿಸಿದ್ದರು. ಅವರು ಹೇಳುತ್ತಾರೆ: ನಾನು ಫ್ರೆಂಚ್ ಗಿಯಾನದಿಂದ ಜಲ್ಸಕ್ಕೋಸ್ಕರ ಹೊರಟಾಗ ನನ್ನ ಕಾಲಿನಲ್ಲಿ ನೋವಿತ್ತು. ಜಲ್ಸದಲ್ಲಿ ಭಾಗವಹಿಸಿದ ಕೂಡಲೆ ಅಲ್ಲಾಹನು ಅದ್ಭುತಕರವಾಗಿ ನನಗೆ ಉಪಶಮನ ದಯಪಾಲಿಸಿದನು. ಜಲ್ಸದ ಕಾಲದಲ್ಲಿ ನೋವಿನ ಸುಳಿವು ಸಹ ಇರಲಿಲ್ಲ ಎಂದು ಹೇಳಿದರು. ನೋಡಿರಿ, ಜಲ್ಸದ ಅನುಗ್ರಹಗಳು ಅಹ್ಮದಿಯರಿಗೆ ತಲಪುವ ಹಾಗೆ ಅನ್ಯರಿಗೂ ತಲಪುತ್ತದೆ.

ನೈಜೀರಿಯಾದ ಪ್ರಸಿದ್ಧ ಟೆಲಿವಿಶನ್ ಎಮ್.ಐ.ಟಿ. ಇದರ ಚೆಯರ್‌ಮೇನ್ ಅಲ್‌ಹಾಜ್ ಯಸಾರಿ ಸಾಹೇಬ್ ಬಂದಿದ್ದರು. ಅವರು ಹೀಗೆ ಹೇಳಿದರು: ಜಲ್ಸದಲ್ಲಿ ಭಾಗವಹಿಸಿದಾಗ ನಾನು ಅರಫಾದಲ್ಲಿರುವಂತೆ ನನಗೆ ಭಾಸವಾಯಿತು. ಇಮಾಮರನ್ನು ಅನುಸರಿಸುವ ದೃಶ್ಯ ನನಗೆ ಅಹ್ಮದಿಯಾ ಜಮಾಅತಿನ ಖಲೀಫರಲ್ಲಿ ಮತ್ತು ಅವರ ಜಮಾಅತಿನಲ್ಲಿ ಕಾಣಿಸಿತು. ಅದನ್ನು ನಾನು ಬೇರೆ ಎಲ್ಲಿಯೂ ಕಂಡಿರಲಿಲ್ಲ. ಅದೇರೀತಿ ಕೋಂಗೋ ಕನ್‌ಸಾಶಾದಿಂದ ಅಲ್ಲಿನ ಕಾನ್ಸಿಟ್ಯೂಶನಲ್ ಕೋರ್ಟಿನ ಒಬ್ಬ ನ್ಯಾಯಾಧೀಶರು ಆಗಮಿಸಿದ್ದರು. ಅವರು ಹೇಳುತ್ತಾರೆ: ಅಹ್ಮದಿಯಾ ಜಮಾಅತ್ ಯಾವ ಇಸ್ಲಾಮ್ ಧರ್ಮದ ಪರಿಚಯ ನನಗೆ ಮಾಡಿ ಕೊಟ್ಟಿದೆಯೋ ಆ ಇಸ್ಲಾಮಿನ ಕೃತಿರೂಪದ ಮಾದರಿಯನ್ನು ಈ ಜಲ್ಸದಲ್ಲಿ ಭಾಗವಹಿಸಿದಾಗ ನಾನು ಕಂಡೆನು. ವಾಸ್ತವಿಕವಾಗಿ ಅಹ್ಮದಿಯಾ ಜಮಾಅತ್ ಪ್ರತಿಪಾದಿಸುವ ಇಸ್ಲಾಮ್ ಧರ್ಮವೇ ನೈಜ ಇಸ್ಲಾಮ್ ಆಗಿದೆ. ಇಸ್ಲಾಮಿನ ಈ ಸಂದೇಶ ಈಗ ಲೋಕಕ್ಕೆ ಆವಶ್ಯಕವಾಗಿದೆ. ಲೋಕದ ಭವಿಷ್ಯತ್ತು ಈ ಸಂದೇಶದೊಂದಿಗೆ ಸಂಬಂಧಿಸಿದೆ ಎಂದು ನನಗೆ ತೋರುತ್ತದೆ ಎಂದು ಅವರು ಹೇಳಿದರು.

ಸಿಯೆರ್ರಾಲಿಯೋನಿನ ವೈಸ್ ಪ್ರೆಸಿಡೆಂಟ್ ಸಹ ಆಗಮಿಸಿದ್ದರು. ಅವರು ಹೇಳುತ್ತಾರೆ: ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಬಹಳ ವೈಭವಶಾಲಿಯಾಗಿದೆ. ಇದು ಎಲ್ಲಾ ಜನಾಂಗಗಳನ್ನು ಒಂದೇ ವೇದಿಕೆಯಲ್ಲಿ ಜಮಾಯಿಸುವ ಏಕ ಮಾತ್ರ ಮಾರ್ಗವಾಗಿದೆ. ಅದೇರೀತಿ ಸಿಯೆರ್ರಾಲಿಯೋನ್ ದೇಶದ ಮೆಕೇನಿ ಪಟ್ಟಣದ ಮೇಯರ್ ಹೇಳಿದರು: ಈ ಮೂರು ದಿನಗಳು ಆಧ್ಯಾತ್ಮಿಕತೆಯಿಂದ ತುಂಬಿದ್ದುವು. ಇದು ನನ್ನ ಜೀವಿತದಲ್ಲಿ ಬೃಹತ್ತಾದ ಕ್ರಾಂತಿ ಉಂಟುಮಾಡಲು ಕಾರಣವಾಗಿವೆ. ಜನರು ಒಬ್ಬರನ್ನೊಬ್ಬರು ಇಷ್ಟು ಪ್ರೀತಿಸುವುದನ್ನು ನಾನು ಎಲ್ಲಿಯೂ ಕಾಣಲಿಲ್ಲ. ಮತ್ತೆ ಸಿಯೆರ್ರಾಲಿಯೋನಿನ ಡೆಪ್ಯುಟಿ ಮಿನಿಸ್ಟರ್ ಆಫ್ ಸ್ಪೋರ್ಟ್ಸ್ ಹೇಳುತ್ತಾರೆ: ಈ ಜಲ್ಸದಲ್ಲಿ ಭಾಗವಹಿಸಿದುದು ನನ್ನ ಜೀವಿತದ ಅತ್ಯಪೂರ್ವ ಅನುಭವವಾಗಿದೆ. ಬೇರೆ ಯಾವುದೇ ಧಾರ್ಮಿಕ ಅಥವಾ ಸಾಮಾಜಿಕ ಸಭೆಗಳಲ್ಲಿ ಅತಿಥಿಗಳನ್ನು ಇಷ್ಟು ಗೌರವಿಸುವುದು ಮತ್ತು ಪ್ರೀತಿಸುವುದನ್ನು ನಾನು ಕಾಣಲಿಲ್ಲ.

ಬೆನಿನ್ ದೇಶದ ನೇಶನಲ್ ಅಸೆಂಬ್ಲಿಯ ಡೆಪ್ಯುಟಿ ಸ್ಪೀಕರ್ ಬಂದಿದ್ದರು. ಅವರು ಹೇಳಿದರು: ನಾನು ಕಂಡ ಅತ್ಯಂತ ಮುಖ್ಯ ವಿಷಯವೇನೆಂದರೆ ಅಹ್ಮದಿಯಾ ಜಮಾಅತಿನ ಜನರು ಅವರ ಖಲೀಫರನ್ನು ಬಹಳ ಪ್ರೀತಿಸುತ್ತಾರೆ ಎಂಬುದು. ಇಂತಹದನ್ನು ನಾನು ಬೇರೆ ಎಲ್ಲಿಯೂ ಕಾಣಲಿಲ್ಲ. ಮತ್ತೆ ಅರ್ಜೆಂಟೈನ್‌ನಿಂದ ಒಬ್ಬ ಅಹ್ಮದಿ ಆಗಮಿಸಿದ್ದರು. ಅವರು ಹೇಳಿದರು: "ನಾನು ಸತ್ಯ ಧರ್ಮವನ್ನು ಹುಡುಕುತ್ತಾ ಹತ್ತು ವರ್ಷ ಕಳೆದೆನು. ಕೊನೆಗೆ ಅಹ್ಮದಿಯಾ ಜಮಾಅತಿನಲ್ಲಿ ಸೇರಿದಾಗ ಸತ್ಯ ಧರ್ಮ ನನಗೆ ದೊರಕಿತು. ಜಲ್ಸ ಸಾಲಾನದ ಸುವ್ಯವಸ್ಥೆಯಿಂದ ನಾನು ಬಹಳ ಪ್ರಭಾವಿತನಾದೆನು. ಜಲ್ಸದಲ್ಲಿ ಯುವ ಜನರು ಭಾಗವಹಿಸಿದುದು ನನ್ನ ಮೇಲೆ ಅತ್ಯಂತ ಪ್ರಭಾವ ಬೀರಿತು. ನಾನು ಅರ್ಜೆಂಟೈನ್ ದೇಶದಲ್ಲಿ ಅಹ್ಮದಿಯಾ ಜಮಾಅತ್‌ಗೆ ಸೇರಲು ಭಾಗ್ಯಗಳಿಸಿದ ಪ್ರಥಮ ಮುಸ್ಲಿಮ್ ಆಗಿರುವೆನು ಎಂಬುವುದಕ್ಕಿಂತ ದೊಡ್ಡ ಸಂತೋಷ ಬೇರೊಂದು ನನಗಿಲ್ಲ.

ಜಪಾನ್ ದೇಶದಿಂದ ಯೂಶಿಯೋ ಅವಾಮೂರ್ ಸಾಹಿಬ್ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳಿದರು: ಬ್ರಿಟನಿನಲ್ಲಿ ಸೇರಿದ ಈ ಜಲ್ಸ ಸಾಲಾನ ನಿಜವಾಗಿಯೂ ಸಂಯುಕ್ತ ರಾಷ್ಟ್ರ ಸಂಘದ ಒಂದು ವಾಸ್ತವಿಕ ಮಾದರಿಯಾಗಿದೆ. ಇಲ್ಲಿ ಪ್ರತಿಯೊಂದು ವಂಶದ ಮತ್ತು ಜನಾಂಗದ ಜನರು ಒಂದು ಕುಟುಂಬದ ಹಾಗೆ ಕಾಣಿಸುತ್ತಿದ್ದಾರೆ. ಈ ಆಧ್ಯಾತ್ಮಿಕ ಪರಿಸರ ನನ್ನ ಹೃದಯದ ಮೇಲೆ ವಿಶಿಷ್ಟ ಪ್ರಭಾವ ಬೀರಿದೆ.

ಜಪಾನ್‌ನಿಂದ ಬಂದ ಒಬ್ಬ ಡಾಕ್ಟರ್, ಜೇವಾನಿ ಮೋಂಟೆ, ಅವರು ವೈದ್ಯ ಶಾಸ್ತ್ರದಲ್ಲಿ ಪಿ.ಎಚ್‌ಡಿ. ಬಿರುದು ಗಳಿಸಿದವರಾಗಿದ್ದಾರೆ. ಟೋಕಿಯೋದಲ್ಲಿ ಇಂಟರ್‌ನೇಶನಲ್

ಬುಕ್ ಫೆಯರ್‌ನ ಸಂದರ್ಭದಲ್ಲಿ ಅವರು ಅಹ್ಮದಿಯ ಜಮಾಅತ್‌ನೊಂದಿಗೆ ಸಂಪರ್ಕ ಹೊಂದಿದ್ದರು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ **ಇಸ್ಲಾಮೀ ಉಸೂಲ್ ಕಿ ಫಿಲಾಸಫೀ** (ಇಸ್ಲಾಮ್ ಧರ್ಮ ತತ್ವಜ್ಞಾನ) ನೀಡಲಾಗಿತ್ತು. ಅಲ್ಲಿನ ಮುಬಲ್ಲಿಗರು ಬರೆಯುತ್ತಾರೆ: ಮರುದಿನ ಅವರು ಬಂದು ಹೇಳಿದರು– ನಾನು ರಾತ್ರಿ ಆ ಪುಸ್ತಕ ಓದಲು ಪ್ರಾರಂಭಿಸಿದೆ. ಈ ಪುಸ್ತಕ ಓದಿ ಮುಗಿಸದೆ ನಿದ್ರಿಸಬಾರದೆಂದು ನನಗೆ ತೋಚಿತು. ಮುಂಜಾನೆ ನಾನು ಈ ಪುಸ್ತಕ ಓದಿ ಮುಗಿಸಿದಾಗ ನನಗೆ ದೃಢಪಟ್ಟಿತು ಇಸ್ಲಾಮ್ ಸತ್ಯಧರ್ಮವಾಗಿದೆ ಮತ್ತು ಸತ್ಯದ ಮಾರ್ಗ ಇದೇ ಆಗಿದೆ ಎಂದು. ಈ ಡಾಕ್ಟರ್ ಸಾಹೇಬರು ಜಲ್ಸ ನೋಡಿ ಹೇಳಿದರು: ನಾನು ಸತ್ಯದ ಶೋಧನೆಯಲ್ಲಿದ್ದೆ. ನನಗೆ ಈಗ ಸತ್ಯ ಲಭಿಸಿತು. ಇಸ್ಲಾಮ್ ಅಹ್ಮದಿಯ್ಯತ್‌ಗಿಂತ ಉತ್ತಮವಾದ ಜೀವಿತ ರೀತಿ ಬೇರೊಂದಿಲ್ಲ ಎಂದು ಹೇಳಿದರು. ಅವರು ಜಲ್ಸ ಮುಕ್ತಾಯಗೊಂಡ ಮರುದಿನ ನನ್ನನ್ನು ಕಂಡು ನಾನು ಬೈಅತ್ ಮಾಡಬಯಸುತ್ತೇನೆ ಎಂದು ಹೇಳಿದರು.. ಅನಂತರ ಅವರ ಬೈಅತ್ ಮಸ್‌ಜಿದ್‌ನಲ್ಲಿ ನಡೆಯಿತು.

ಸ್ಪೈಯಿನ್ ದೇಶದ ನೇಶನಲ್ ಎಸೆಂಬ್ಲಿಯ ಇಬ್ಬರು ಸದಸ್ಯರು ಜಲ್ಸಕ್ಕೆ ಆಗಮಿಸಿದ್ದರು. ಅವರಲ್ಲೊಬ್ಬರು, ಜೋಸ್ ಮಾರಿಯಾ ಎಂಬವರು ಹೇಳಿದರು: ಮೂರು ದಿನಗಳಲ್ಲೂ ನಾವು ಜಲ್ಸದಲ್ಲಿ ಭಾಗವಹಿಸಿದೆವು. ಇಂತಹ ವ್ಯವಸ್ಥೆ ಸರಕಾರಗಳು ಸಹ ನಡೆಸಲಾರವು. ಇಲ್ಲಿ ಸ್ವಯಂ ಸೇವಕರು ಎಲ್ಲಾ ಕೆಲಸ ಮಾಡುತ್ತಿದ್ದಾರೆ. ನಾವು ಈ ಜಲ್ಸದಿಂದ ಬಹಳ ವಿಷಯಗಳನ್ನು ಕಲಿತು ಹೋಗುತ್ತಿದ್ದೇವೆ ಎಂದು ಹೇಳಿದರು. ಸ್ವಯಂ ಸೇವಕರು ಸಹ ಮೌನವಾಗಿ ತಬ್ಲೀಗ್ ಮಾಡುವವರಾಗಿದ್ದಾರೆ. ಅವರೊಂದಿಗಿದ್ದ ಸ್ಪೈಯಿನಿನ ನ್ಯಾಶನಲ್ ಎಸೆಂಬ್ಲಿಯ ಮಹಿಳಾ ಸದಸ್ಯೆ ಹೇಳಿದರು: ಅಹ್ಮದಿಯಾ ಜಮಾಅತ್ ಲೋಕದಲ್ಲಿ ಶಾಂತಿ ಸ್ಥಾಪಿಸಲು ಅವಿಶ್ರಾಂತ ಪರಿಶ್ರಮಪಡುತ್ತಿದೆ. ನಾನು ನಿಮ್ಮ ಖಲೀಫರಿಗೆ ಹೇಳಲು ಬಯಸುತ್ತೇನೆ– ನೀವು ಯಾವಾಗಲಾದರೂ ನಮ್ಮ ದೇಶಕ್ಕೆ ಬಂದರೆ ಅದನ್ನು ನಿಮ್ಮ ಮನೆ ಎಂದೇ ಭಾವಿಸಿರಿ.

ಫ್ರಾನ್ಸಿನ ಅಮೀರ್ ಸಾಹೇಬರು ಹೀಗೆ ಹೇಳಿದರು: ಫ್ರಾನ್ಸ್‌ನಿಂದ ಒಂದೇ ಕುಟುಂಬದ ಮೂವತ್ತೈದು ಜನರು ಜಲ್ಸಕ್ಕೆ ಆಗಮಿಸಿದ್ದರು. ಅವರಲ್ಲಿ ಇಪ್ಪತ್ತೆಂಟು ಜನರು ಅಹ್ಮದಿಯಾಗಿದ್ದರು. ತಂದೆ, ತಾಯಿ, ಒಬ್ಬ ಮಗಳು ಮತ್ತು ಅವರ ಮೂವರು ಮಕ್ಕಳು ಅಹ್ಮದಿಯರಾಗಿರಲಿಲ್ಲ. ಜಲ್ಸದ ಎರಡನೆಯ ದಿನ ತಂದೆ ಹೇಳಿದರು: ನಾನು ಈ ದಿನ ಐದು ಸಾರಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಂಡೆನು. ಅವರು ಮತ್ತು ಪತ್ನಿ ಆಲಮೀ ಬೈಅತ್‌ನಲ್ಲಿ ಸೇರಿ ಬೈಅತ್ ಮಾಡಿದರು. ಬೈಅತ್ ಮಾಡುವಾಗ ಕುಟುಂಬದ ಎಲ್ಲರೂ ಅಲ್ಲಿದ್ದರು. ಅವರೆಲ್ಲರೂ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಈ ವರ್ಷ ಗ್ರೀಸ್‌ನಿಂದ ಸಹ ಪ್ರಥಮ ಬಾರಿ ಪ್ರತಿನಿಧಿ ಸಂಘ ಆಗಮಿಸಿತು. ಈ ವಿಷಯಗಳೆಲ್ಲಾ ಅಹ್ಮದಿಯರನ್ನು ಕೃತಜ್ಞತೆ ಅರ್ಪಿಸುವವರನ್ನಾಗಿ ಮಾಡುತ್ತಿದೆ. ಚಿಕ್ಕಪುಟ್ಟ ಕುಂದುಕೊರತೆಗಳನ್ನು ದೂರ ಸರಿಸಲು ಪ್ರಯತ್ನಮಾಡಬೇಕಾಗಿದೆ.

ಅದೇರೀತಿ ಸ್ವಿಝರ್‌ಲೇಂಡ್‌ನಿಂದ ಆಗಮಿಸಿದ, ಪ್ರೆಸ್ ಮತ್ತು ಮೀಡಿಯಾದೊಂದಿಗೆ ಸಂಬಂಧ ಹೊಂದಿರುವ ಬ್ರಾನ್ಸ್‌ವೇಲ್ ಸ್ಲೇಚ್‌ಬೇಲಿ ಹೇಳುತ್ತಾರೆ: ನಾನು ಜಲ್ಸದ ಕೊನೆಯದಿನ ಬಂದೆ. ನಾನು ಲೋಕದ ಅನೇಕ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೇನೆ. ಆದರೆ ಇಂತಹ ಸಮ್ಮೇಳನ ನಾನು ಎಲ್ಲಿಯೂ ಕಾಣಲಿಲ್ಲ. ಸ್ವಿಝರ್‌ಲೇಂಡ್‌ನಿಂದ ಬಂದ ಮತ್ತೋರ್ವ ಮುಸ್ಲಿಮೇತರನಾದ ಮೈಕಲ್ ಶೀರನ್ ಬರ್ಗ್ ಹೇಳುತ್ತಾರೆ: ಎಲ್ಲದಕ್ಕಿಂತಲೂ ಮಿಗಿಲಾದುದು ಆಲಮೀ ಬೈಅತ್ ದೃಶ್ಯವಾಗಿತ್ತು. ಜನರು ಎಷ್ಟು ನಿಷ್ಠಾವಂತರಾಗಿ ತಮ್ಮ ಖಲೀಫರೊಂದಿಗೆ ತಮಗಿರುವ ಸಂಬಂಧ ಪ್ರಕಟಿಸುತ್ತಾರೆ.

ಒಬ್ಬ ನವ ಅಹ್ಮದಿ ಕೋಸರಾಯಿ ಎಂಬ ನಗರದಲ್ಲಿ ಹನ್ನೊಂದು ವರ್ಷ ಮೇಯರ್ ಆಗಿದ್ದರು. ಅವರು ಜಲ್ಸದಲ್ಲಿ ಭಾಗವಹಿಸಿ ಹೇಳಿದರು: ನಾನು ಹಿಂದಿರುಗಿ ಹೋಗಿ ನನ್ನ ಕುಟುಂಬದ ಜನರಿಗೂ ಕೋಸರಾಯಿ ನಗರದ ಜನರಿಗೂ ಇಸ್ಲಾಮ್ ಬಗ್ಗೆ ಇರುವ ತಪ್ಪು ಗ್ರಹಿಕೆಗಳನ್ನು ನಿವಾರಿಸಲು ದೃಢನಿರ್ಧಾರ ಮಾಡಿದ್ದೇನೆ ಎಂದು ಹೇಳಿದರು. ಮತ್ತು ಜಮೈಕಾ ದೇಶದ ಒಬ್ಬ ಜರ್ನಲಿಸ್ಟ್ ಮಹಿಳೆ ಆಗಮಿಸಿದ್ದರು. ಆಕೆ ನನ್ನ ಸಂದರ್ಶನ ಮಾಡಿದರು. ಆಕೆ ಹೇಳಿದರು: ನಾನು ಹಿಂದಿರುಗಿ ಹೋದ ನಂತರ ಲೇಖನ ಬರೆಯುವೆನು ಅಥವಾ ಡೊಕ್ಯುಮೆಂಟರಿ ರಚಿಸುವೆನು ಎಂದು ತಿಳಿಸಿದರು. ಈ ಮೂಲಕ ತಬ್ಲೀಗ್ ಮಾಡಲು ಇನ್ನಷ್ಟು ಸಂದರ್ಭ ಸಿಗುವುದು. ಜಮೈಕದಲ್ಲಿ ಅಹ್ಮದಿಯಾ ಜಮಾಅತಿನ ತತ್ವಗಳನ್ನು ಹರಡಲು ನಾನು ಪೂರ್ಣ ಪ್ರಯತ್ನ ಮಾಡುವೆನು ಎಂದು ಸಹ ಅವರು ಹೇಳಿದರು. ಆಕೆ ಕ್ರೈಸ್ತಳಾಗಿದ್ದಾರೆ. ನಮ್ಮ ತಬ್ಲೀಗ್‌ಗೆ ದಾರಿಮಾಡಿ ಕೊಡುತ್ತಿದ್ದಾರೆ.

ಪನಾಮ ದೇಶದಿಂದ ರೋನಾಲ್ಡೋ ಕೋಚೆ ಆಗಮಿಸಿದ್ದಾರೆ. ಅವರು ಹೇಳಿದರು: ನಾನು ಇಲ್ಲಿ ಪ್ರೀತಿ ಮತ್ತು ಶಾಂತಿಯ ಎಂತಹ ವಾತಾವರಣ ಕಂಡನೆಂದರೆ ನನಗೆ ಊಹಿಸಲು ಸಹ ಸಾಧ್ಯವಿರಲಿಲ್ಲ. ಇನ್ನು ಮುಂದೆ ಯಾರಾದರೂ ಇಸ್ಲಾಮ್ ಬಗ್ಗೆ ತಪ್ಪು ಹೇಳಿಕೆ ನೀಡಿದರೆ ನಾನು ಅದನ್ನು ತೀವ್ರವಾಗಿ ಪ್ರತಿರೋಧಿಸುವೆನು.

ಖಝಖಿಸ್ಥಾನದಿಂದ ತಾನಾಶವಾಮ ಎಂಬ ಮಹಿಳೆ ಬಂದಿದ್ದರು. ಅವರು ಸ್ಟೇಟ್ ಯುನಿವರ್ಸಿಟಿಯ ಪ್ರೊಫೆಸರ್ ಮತ್ತು ನ್ಯೂಯಾರ್ಕ್ ಅಕಾಡಮಿಯ ಸದಸ್ಯೆ ಸಹ ಆಗಿದ್ದಾರೆ. ಕ್ರಿ.ಶಕ 2000ದಲ್ಲಿ ಆಕೆಯನ್ನು ಲೇಡಿ ಆಫ್ ದಿ ವರ್ಲ್ಡ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಆಕೆ ಹೇಳುತ್ತಾರೆ: ನನ್ನ 75 ವರ್ಷ ಕಾಲದ ಜೀವಿತದಲ್ಲಿ ಅನೇಕ ಸ್ಥಳಗಳನ್ನು ಸಂದರ್ಶಿಸಿದ್ದೇನೆ. ಆದರೆ ಮಾನವರೊಂದಿಗೆ ವಾಸ್ತವಿಕ ಪ್ರೀತಿ ಮತ್ತು ಸಹಾಯ ಮಾಡುವ ದೃಶ್ಯಗಳನ್ನು ಇಲ್ಲಿ ಮಾತ್ರ ಕಂಡೆನು. ಅದೇರೀತಿ ಒಬ್ಬ ವಿದ್ಯಾರ್ಥಿನಿ ಗ್ವಾಟೆಮಾಲಾದಿಂದ ಆಗಮಿಸಿದ್ದಳು. ಆಕೆ ಹೇಳುತ್ತಾಳೆ: ಜಲ್ಸದಲ್ಲಿ ಭಾಗವಹಿಸಿದುದು ನನಗೆ ಅತ್ಯಂತ ಸಂತೋಷದಾಯಕವಾಗಿದೆ. ಈ ಜಲ್ಸದ ಆಧ್ಯಾತ್ಮಿಕ

ವಾತಾವರಣ ನನ್ನ ಮುಂದಿನ ಜೀವಿತಕ್ಕೆ ಮಾರ್ಗದರ್ಶನ ನೀಡುತ್ತದೆ ಎಂದು ಹೇಳಿದಳು. ಅಂತೆಯೇ ಕ್ರೋಯೇಶಿಯಾದಿಂದ ಇಪ್ಪತ್ತೆಂಟು ಜನರು ಆಗಮಿಸಿದ್ದರು. ಅಲ್ಲಿನ ಪಾರ್ಲಿಮೆಂಟ್ ಸದಸ್ಯರಾದ ಪಾಂಡೆಕ್ಸ್ ಹೇಳುತ್ತಾರೆ: ಒಂದು ಮುಸ್ಲಿಮ್ ಸಂಘಟನೆಯ ಸಮ್ಮೇಳನದಲ್ಲಿ ನಾನು ಪ್ರಥಮ ಬಾರಿ ಭಾಗವಹಿಸುತ್ತಿದ್ದೇನೆ. ಅವರು ಜಲ್ಸದ ಕೊನೆಯ ಭಾಷಣವನ್ನು ಸಹ ಆಲಿಸಿದ್ದಾರೆ. ಅವರು ಹೇಳಿದರು: ಈ ಭಾಷಣದ ಉಪದೇಶಗಳ ಪ್ರಕಾರ ವರ್ತಿಸಿದರೆ ಲೋಕವು ಶಾಂತಿಯ ಬೀಡಾಗುವುದರಲ್ಲಿ ಸಂಶಯವಿಲ್ಲ. ಅವರು ಆ ಭಾಷಣದಿಂದ ಬಹಳ ಪ್ರಭಾವಿತರಾಗಿದ್ದರು.

ಸಿಯರ್ರಾಲಿಯೋನಿನ ನ್ಯಾಶನಲ್ ಟಿ.ವಿ.ಯ ಜರ್ನಲಿಸ್ಟ್ ಸಹ ಆಗಮಿಸಿದ್ದರು. ಅವರು ಹೇಳಿದರು: ನೀವು ನನ್ನನ್ನು ಜಲ್ಸಕ್ಕೆ ಆಮಂತ್ರಿಸಿ ನನಗೆ ಬಹಳ ದೊಡ್ಡ ಉಪಕಾರ ಮಾಡಿದಿರಿ. ನಾನು ಜಲ್ಸದ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತ್‌ಗೆ ಸೇರುವ ದೃಢನಿರ್ಧಾರ ಮಾಡಿದೆ ಎಂದು ಹೇಳಿದರು. ಹಾಗೆ ಅವರು ಆಲಮೀ ಬೈಅತ್ ಸಂದರ್ಭದಲ್ಲಿ ಬೈಅತ್ ಮಾಡಿದರು.

ಬ್ರಿಟಿಷ್ ರೋಯಲ್ ಏರ್‌ಫೋರ್ಸ್‌ನಲ್ಲಿ ಗ್ರೂಪ್ ಕ್ಯಾಪ್ಟನ್ ಆಗಿರುವ ಪಾಲ್‌ಸಿಂಗರ್ ಡ್ಯೂಸ್ ಎಂಬವರು ಹೇಳುತ್ತಾರೆ: ನಾನು ಒತ್ತಿ ಹೇಳಲು ಬಯಸುವುದೇನೆಂದರೆ, ನಾನು ನೂರಾರು ಕಾರ್ಯಕ್ರಮಗಳನ್ನು ನೋಡಿದ್ದೇನೆ. ಆದರೆ ಇಷ್ಟು ಸುವ್ಯವಸ್ಥಿತವಾದ ಕಾರ್ಯಕ್ರಮ ನಾನು ಎಲ್ಲಿಯೂ ಕಂಡಿಲ್ಲ.

ಐವರಿಕೋಸ್ಟ್‌ನಿಂದ ಇಬ್ಬರು ಪಾರ್ಲಿಮೆಂಟ್ ಸದಸ್ಯರು ಆಗಮಿಸಿದ್ದರು. ಅವರಲ್ಲೊಬ್ಬರು ಹೇಳುತ್ತಾರೆ: ನಾನು ಅನೇಕ ವರ್ಷಗಳಿಂದ ಅಹ್ಮದಿ ಆಗಿದ್ದೇನೆ. ಆದರೆ ಇಲ್ಲಿನ ಆಧ್ಯಾತ್ಮಿಕ ಪರಿಸರವನ್ನು ಈಗ ನಾನು ಮೊದಲನೆಯ ಸಲ ನೇರವಾಗಿ ಕಂಡೆನು. ನಾನು ಮೊದಲೇ ಅಹ್ಮದಿಯಾಗಿದ್ದೆನು. ಆದರೆ ಜಲ್ಸದ ನಂತರ ನನ್ನ ವಿಶ್ವಾಸ ಇನ್ನಷ್ಟು ದೃಢಪಟ್ಟಿತು.

ಬ್ರಿಟಿಷ್ ಸೊಸೈಟಿ ಆಫ್ ಟ್ಯೂರಿನ್ ಶ್ರೌಡ್ ಇದರ ನ್ಯೂಸ್ ಲೆಟರ್ ಪತ್ರಿಕೆಯ ಸಂಪಾದಕ ಬಾಫ್ರೇ ಹೇಳುತ್ತಾರೆ: (ಇವರು ಟ್ಯೂರಿನ್ ಶ್ರೌಡ್ ಬಗ್ಗೆ ಅಧ್ಯಯನ ನಡೆಸಿದ ವಿದ್ವಾಂಸರಲ್ಲಿ ಒಬ್ಬರು) ನಾನು ಯೇಸು ಕ್ರಿಸ್ತರ ಶವ ವಸ್ತ್ರದ ಬಗ್ಗೆ ಎಲ್ಲೆಲ್ಲಾ ಮಾತನಾಡಿರುವೆನೋ ಅವುಗಳಲ್ಲೆಲ್ಲಾ ಅತ್ಯಂತ ಉತ್ತಮ ಸ್ಥಳ ಇಲ್ಲಿನದಾಗಿತ್ತು ಎಂದು ಅವರು ಹೇಳಿದರು.

ಒಟ್ಟಿನಲ್ಲಿ ಅಲ್ಲಾಹನ ಅನುಗ್ರಹದಿಂದ ಪತ್ರಿಕೆಗಳಲ್ಲೂ ಇತರ ಮಾಧ್ಯಮಗಳಲ್ಲೂ ಜಮಾಅತಿನ ಬಗ್ಗೆ ಬಹಳ ವಿಶಾಲವಾಗಿ ಪ್ರಚಾರ ಆಗಿದೆ. ಇದಕ್ಕೋಸ್ಕರ ನಾವು ಅಲ್ಲಾಹನ ಮುಂದೆ ಬಾಗಿ ಕೃತಜ್ಞತೆ ಅರ್ಪಿಸಬೇಕು. ಜಲ್ಸದ ಸಮಾಚಾರ ಮತ್ತು ವೀಡಿಯೋ ಕ್ಲಿಪ್ಸ್ ಟೆಲಿವಿಶನ್ ಮತ್ತು ಆನ್‌ಲೈನ್ ವೀಡಿಯೋ ಮುಖಾಂತರ 3.3 ಮಿಲಿಯನ್ ಜನರಿಗೆ ತಲಪಿದೆ. ರೇಡಿಯೋ ಮೂಲಕ 34 ಪ್ರೋಗ್ರಾಮ್‌ಗಳು 2.79 ಮಿಲಿಯನ್ ಜನರಿಗೆ ತಲಪಿದೆ. ಪ್ರಿಂಟ್ ಎಂಡ್ ಆನ್‌ಲೈನ್ ಮೀಡಿಯಾದ 14 ಫೋರ್ಮ್‌ಗಳ ಮೂಲಕ 7.7 ಮಿಲಿಯನ್ ಜನರಿಗೆ ಸಂದೇಶ ತಲಪಿದೆ. ಸೋಶಿಯಲ್ ಮೀಡಿಯಾದಲ್ಲಿ 1195 ಜನರು ಭಾಗವಹಿಸಿ ಅವರ ಮೂಲಕ ಜಲ್ಸದ ಪ್ರೋಗ್ರಾಮ್ ಐದು ಮಿಲಿಯನ್ ಜನರಿಗೆ ತಲಪಿದೆ. ಈ ರಿತಿ ಒಟ್ಟಿಗೆ 12.63 ಮಿಲಿಯ ಜನರಿಗೆ ಜಲ್ಸದ ಕಾರ್ಯಕ್ರಮ, ಸಮಾಚಾರ, ಸಂದೇಶಗಳು, ಚಿತ್ರಗಳು, ವೀಡಿಯೋ ಕ್ಲಿಪ್ಸ್‌ಗಳು ತಲಪಿದೆ. ಆಫ್ರಿಕಾದ ದೇಶಗಳು, ಬ್ರಿಟನ್, ಸ್ಕಾಟ್‌ಲೇಂಡ್, ಐಯರ್‌ಲೇಂಡ್, ಯು.ಎಸ್.ಎ, ಕೆನಡ, ಪಾಕಿಸ್ತಾನ, ಇಂಡಿಯಾ, ಫ್ರಾನ್ಸ್, ಜಮೈಕಾ, ಬೊಲೀವಿಯಾ, ಗ್ರೀಸ್, ಮೊದಲಾದ ದೇಶಗಳಲ್ಲಿ ಜಲ್ಸದ ಸಮಾಚಾರಗಳು ಪ್ರಕಟವಾಗಿವೆ. ಬಿ.ಬಿ.ಸಿ. ನ್ಯೂಸ್24 ಚ್ಯಾನಲ್‌ನಲ್ಲಿ ಜಲ್ಸದ ಸಮಾಚಾರ ಮೂರು ಸಲ ಬಿತ್ತರಿಸಲಾಗಿದೆ. ಇದು ಮೊದಲನೆಯ ಸಲ ಹೀಗಾಗಿದೆ. ಇಂಟರ್‌ನೇಶನಲ್ ನ್ಯೂಸ್ ಏಜನ್ಸಿ ಫ್ರಾನ್ಸ್ ಜಲ್ಸದ ಸಮಾಚಾರ ನೀಡಿದೆ.

ರೇಡಿಯೋ ಕವರೇಜ್ ಬಗ್ಗೆ ಹೇಳುವುದಾದರೆ ಒಟ್ಟಾರೆ 2.79 ಮಿಲಿಯನ್ ಜನರಿಗೆ ಜಮಾಅತ್ ಸಂದೇಶ ತಲಪಿದೆ. ಬಿ.ಬಿ.ಸಿ.ಯ ಒಬ್ಬ ಜರ್ನಲಿಸ್ಟ್ ಕೆರೋಲಿನ್ ವೈಟ್ ನನ್ನ ಸಂದರ್ಶನ ಮಾಡಿ ಅದನ್ನು ಪ್ರಸಾರ ಮಾಡಿದಾಗ ಇಲ್ಲಿನ ಮುಸ್ಲಿಮ್ ಸಂಘಟನೆಗಳು ಬಹಳ ಬೊಬ್ಬೆ ಹೊಡೆಯಲು ತೊಡಗಿದ್ದಾರೆ. ನಾವು ಒಟ್ಟಿಗೆ ಸೇರಿ ಮುಸ್ಲಿಮರ ಪ್ರಾತಿನಿಧ್ಯವಹಿಸುವ ಕೆಲಸ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಒಂದು ಪತ್ರಿಕೆಯಲ್ಲಿ ಎರಡು ಲೇಖನಗಳು ಪ್ರಕಟವಾಗಿವೆ. ಸೋಶಿಯಲ್ ಮೀಡಿಯಾ ಟ್ವಿಟರ್ ಇತ್ಯಾದಿಗಳ ಮೂಲಕ ಸಹ ಸಂದೇಶ ಪ್ರಸಾರವಾಗಿದೆ. ಅದೂ ಅಲ್ಲದೆ ಯು.ಕೆ.ಯ ಪ್ರೆಸ್ ಮೀಡಿಯಾ ಮೂಲಕ ಅಂದಾಜು ಮೂರು ಮಿಲಿಯನ್ ಜನರಿಗೆ ಸಂದೇಶ ತಲಪಿರಬಹುದು ಎಂದು ನಾನು ಭಾವಿಸುತ್ತೇನೆ.

ಆಫ್ರಿಕದ ಘಾನ, ನೈಜೀರಿಯಾ, ಸಿಯೆರ್ರಾಲಿಯೋನ್, ಯುಗಾಂಡಾ, ಕೋಂಗೋ ಕೆನ್‌ಸಾಶಾ ದೇಶಗಳಲ್ಲಿ ಜಲ್ಸದ ಲೈವ್ ಕವರೇಜ್ ನೀಡಲಾಗಿದೆ. ಅವರು ಹದೀಖತುಲ್ ಮಹ್‌ದಿಯಿಂದ ನೇರವಾಗಿ ಪ್ರಸಾರ ಮಾಡಿದ್ದಾರೆ.

ಘಾನದ ಒಬ್ಬ ವ್ಯಕ್ತಿ ಫೋನ್ ಮಾಡಿ ಹೇಳಿದರು: ನಾನು ಕ್ರೈಸ್ತನಾಗಿದ್ದೇನೆ. ಆದರೆ ಜಲ್ಸದ ದೃಶ್ಯಗಳನ್ನು ನೋಡಿ ನಾನು ಭಾವಪರವಶನಾಗಿದ್ದೇನೆ. ನನಗೆ ಕಣ್ಣೀರು ತಡೆಯಲಾಗುವುದಿಲ್ಲ. ಈಗ ಇಸ್ಲಾಮಿನ ಪ್ರಾತಿನಿಧ್ಯ ವಹಿಸುವುದರಲ್ಲಿ ಅಹ್ಮದಿಯಾ ಜಮಾಅತ್ ಮುಂಚೂಣಿಯಲ್ಲಿದೆ. ನಾನು ನಿಮ್ಮ ಮುಬಲ್ಲಿಗ್ ಆಗಿ ಅಹ್ಮದಿಯಾ ಜಮಾಅತಿನ ಸಂದೇಶ ಪ್ರಚಾರ ಮಾಡಬೇಕೆಂದು ನನ್ನ ಅಭಿಲಾಷೆಯಾಗಿದೆ. ಅದಕ್ಕೋಸ್ಕರ ಪ್ರಾರ್ಥಿಸುತ್ತಿದ್ದೇನೆ ಎಂದು ಹೇಳಿದರು. ಘಾನದ ಒಬ್ಬ ಮಹಿಳೆ ಹೇಳಿದರು: ನಾನು ಮುಸ್ಲಿಮಳಾಗಿದ್ದೇನೆ. ಆದರೆ ಜಲ್ಸದ ಕಾರ್ಯಕ್ರಮ ನೋಡಿ ನಾನು ಅಹ್ಮದಿಯಾಗಬೇಕೆಂದು ಇಚ್ಛಿಸುತ್ತೇನೆ.

ಸಿಯೆರ್ರಾಲಿಯೋನ್‌ನಲ್ಲಿ ಅಲ್ಲಾಹನ ಅನುಗ್ರಹದಿಂದ ಜಲ್ಸ ಸಾಲಾನದ ಪ್ರಸಾರ 38 ಗಂಟೆಗಳ ಕಾಲ ಮಾಡಲಾಯಿತು. ಕೋಂಗೋ ಕನ್‌ಸಾಶಾದ ನಾಲ್ಕು ದೊಡ್ಡ ನಗರಗಳಲ್ಲಿ ಜಲ್ಸದ ಕಾರ್ಯಕ್ರಮಗಳನ್ನು ಟಿ.ವಿ.ಯಲ್ಲಿ

ಬಿತ್ತರಿಸಲಾಯಿತು. ಇವುಗಳ ಪೈಕಿ ಎರಡು ನಗರಗಳಲ್ಲಿ ನನ್ನ ಸಮಾರೋಪ ಭಾಷಣ ಬಿತ್ತರಿಸಲಾಯಿತು. ಇನ್ನೆರಡು ನಗರಗಳಲ್ಲಿ ಜಲ್ಸದ ಎಲ್ಲಾ ಕಾರ್ಯಕ್ರಮಗಳು ಬಿತ್ತರಿಸಲ್ಪಟ್ಟವು. ಒಬ್ಬರು ಹೇಳಿದರು: ಟಿ.ವಿ.ಯಲ್ಲಿ ನಿಮ್ಮ ಜಲ್ಸ ನೋಡಿದೆ. ಇಷ್ಟು ಪ್ರಿಯವಾದ ಉಪದೇಶಗಳನ್ನು ನೀಡುವವರು ಸಹ ಇದ್ದಾರೆಂದು ತಿಳಿದು ಸಂತೋಷವಾಯಿತು.

ಮಾಲಿ ದೇಶದಲ್ಲಿ 15 ರೇಡಿಯೋ ಸ್ಟೇಶನ್‌ಗಳ ಮೂಲಕ ಜಲ್ಸದ ಮೂರು ದಿನಗಳ ಕಾರ್ಯಕ್ರಮ ಪ್ರಸಾರ ಮಾಡಲಾಯಿತು. ಈ ರೀತಿ ಅಲ್ಲಿ ಹತ್ತು ಮಿಲಿಯನ್ ಜನರು ಜಲ್ಸದ ಕಾರ್ಯಕ್ರಮಗಳನ್ನು ತಮ್ಮ ಸ್ವಂತ ಭಾಷೆಯಲ್ಲಿ ಆಲಿಸಿದರು.

ಇದೇ ರೀತಿ ಬುರ್ಕಿನೋಫಾಸೋ ಎಂಬ ಆಫ್ರಿಕನ್ ದೇಶದಲ್ಲಿ ನಾಲ್ಕು ರೇಡಿಯೋ ಸ್ಟೇಶನ್‌ಗಳು ಜಲ್ಸದ ಮೂರು ದಿನಗಳ ಕಾರ್ಯಕ್ರಮ ಪ್ರಸಾರ ಮಾಡಿತು. ಅದನ್ನು ಆಲಿಸುವವರು ಬಹಳ ಜನರಿದ್ದಾರೆ. ಸಿಯೆರ್ರಾಲಿಯೋನ್‌ನಲ್ಲೂ ಕಾರ್ಯಕ್ರಮಗಳು ಪ್ರಸಾರಗೊಂಡವು. ಈ ರೀತಿ ಅಲ್ಲಾಹನ ಅನುಗ್ರಹದಿಂದ ಮಿಲಿಯ ಗಟ್ಟಲೆ ಜನರಿಗೆ ಜಮಾಅತಿನ ಸಂದೇಶ ತಲಪಿತು. ಅಲ್ಲಾಹನ ಅನುಗ್ರಹದಿಂದ ನಮ್ಮ ಪ್ರೆಸ್, ಮೀಡಿಯಾ ಟೀಮ್‌ಗಳು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಎಂ.ಟಿ.ಎ. ಸಹ ವಿಶಿಷ್ಟವಾಗಿ ಬಹಳ ಕೆಲಸ ಮಾಡಿತು. ಆಫ್ರಿಕನ್ ದೇಶಗಳ ಮೇಲ್ವಿಚಾರಕರಾಗಿ ನೇಮಿಸಲ್ಪಟ್ಟವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಇವರೆಲ್ಲರಿಗೂ ಅಲ್ಲಾಹನು ಉತ್ತಮ ಪ್ರತಿಫಲ ನೀಡಲಿ.

ಒಟ್ಟಿನಲ್ಲಿ ಅಲ್ಲಾಹನ ಅನುಗ್ರಹದಿಂದ ಈ ಜಲ್ಸದ ಮೂಲಕ ಜಮಾಅತಿನ ಪರಿಚಯ ಬಹಳ ವಿಶಾಲವಾಗಿ ಆಗಿದೆ. ಇದರಲ್ಲಿ ಅನೇಕರು ಕಾರ್ಯಕರ್ತರಾಗಿ ಕೆಲಸ ಮಾಡಿದ್ದಾರೆಂದು ನಾನು ಇದರ ಮೊದಲು ಸಹ ಇದರ ಬಗ್ಗೆ ಹೇಳಿರುವೆನು. ಎಂ.ಟಿ.ಎ.ದಲ್ಲೂ ಪ್ರೆಸ್ ಸೆಕ್ಷನ್‌ನಲ್ಲೂ ಕೆಲಸ ಮಾಡುವವರು ಯು.ಕೆ.ಯ ಯುವ ಜನರಾಗಿದ್ದಾರೆ. ಅಲ್ಲಾಹನು ಅವರ ಕಾರ್ಯಕ್ಷಮತೆಯನ್ನು ವರ್ಧಿಸುವವನಾಗಲಿ – ಆಮೀನ್.

{ಖುತ್‌ಬದ ಕೊನೆಗೆ ಹುಝೂರ್, ಮಿರ್ಝಾ ರಫೀಕ್ ಅಹ್ಮದ್ ಸಾಹೇಬರ ಪತ್ನಿ ಸಯ್ಯಿದ ಫರೀದ ಸಾಹಿಬ, ಮೂರು ದಿನಗಳ ಹಿಂದೆ ಮೃತರಾದುದನ್ನು ಪ್ರಸ್ತಾಪಿಸಿದರು. ಅವರ ಕುಟುಂಬದ ಬಗ್ಗೆ ಅವರ ಸದ್ಗುಣಗಳ ಬಗ್ಗೆ ಮತ್ತು ಅವರು ಮಾಡಿದ ಸೇವೆಗಳ ಬಗ್ಗೆ ಪ್ರಸ್ತಾಪಿಸಿದರು. ಮೃತರಾದ ಅವರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಸೊಸೆಯಾಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತ್ ದಯಪಾಲಿಸಲಿ ಮತ್ತು ದಯೆದೋರಲಿ. ಅವರ ಮಕ್ಕಳನ್ನು ಅಲ್ಲಾಹನು ಸಂರಕ್ಷಿಸುವವನಾಗಲಿ ಎಂದು ಪ್ರಾರ್ಥಿಸಿದರು).

––––––––––––––*****––––––––––––––

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 28-08-2015.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim | ***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon